# Government of Karnataka
## Deposition Sheet (R.P.N.57) Form 4 Criminal
### ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ದೇವದುರ್ಗ

| | |
|---|---|
| ಕ್ರಿಮಿನಲ್ ಪ್ರಕರಣ ಸಂಖ್ಯೆ | 388/2018 |

ದಿನಾಂಕ 18-02-2026 ರಂದು ಸಾಕ್ಷಿಯನ್ನು ಕರೆಯಿಸಿ ಪ್ರತಿಜ್ಞಾ ವಿಧಿ ಬೋಧಿಸಲಾಯಿತು.

ಚಾಸಾಃ 10 ಪ್ರಾಸಾಃ 9

| | |
|---|---|
| ಹೆಸರು | ರಾಮಣ್ಣ ಗುಳೇದಕರ |
| ತಂದೆಯ ಹೆಸರು | ಪರಪ್ಪ |
| ವಯಸ್ಸು | 70 ವರ್ಷ |
| ಉದ್ಯೋಗ | ನಿವೃತ್ತ ಮುಖ್ಯಪೇದೆ |
| ವಾಸಸ್ಥಳ | ದೇವದುರ್ಗ |

**ಮುಖ್ಯ ವಿಚಾರಣೆಃ ಮಾನ್ಯ ಸ ಸ ಅ ರವರಿಂದಃ**

ನಾನು ಸುಮಾರು 15 ವರ್ಷಗಳವರೆಗೆ ದೇವದುರ್ಗ ಪೋಲಿಸ್ ಠಾಣೆಯಲ್ಲಿ ಮುಖ್ಯಪೇದೆಯಾಗಿ ಕರ್ತವ್ಯ ನಿರ್ವಹಿಸಿ ನಂತರ ನಿವೃತ್ತಿ ಹೋಂದಿರುತ್ತೇನೆ.

ದಿ: 28-07-2015 ರಂದು ಮಧ್ಯಹ್ನಾ 2-00 ರಿಂದ ರಾತ್ರಿ 9-00 ಗಂಟೆಯವರೆಗೆ ನಾನು ಠಾಣೆ ಕರ್ತವ್ಯದಲ್ಲಿದ್ದಾಗ, ರಾತ್ರಿ 8-30 ಗಂಟೆ ಸುಮಾರಿಗೆ ಚಾಸಾ-1 ರವರು ಠಾಣೆಗೆ ಹಾಜರಾಗಿ ಲಿಖಿತ ದೂರನ್ನು ಹಾಜರು ಪಡಿಸಿದ್ದು ಸದರಿ ದೂರನ್ನು ಪಡೆದುಕೊಂಡು, ನಾನು ಅದನ್ನು ಸ್ವೀಕರಿಸಿ ಠಾಣಾ ಗುನ್ಹಾ ನಂಬರ್ 186/2015 ರಂತೆ ಭಾರತೀಯ ದಂಡ ಸಂಹಿತೆಯ ಕಲಂ 419, 420, 465, 468, 471 ಸಹವಾಚಕ ಕಲಂ 34 ರೀತ್ಯಾ ಪ್ರಥಮ ವರ್ತಮಾನ ವರದಿಯನ್ನು ದಾಖಲಿಸಿಕೊಂಡು ಮಾನ್ಯ ನ್ಯಾಯಾಲಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಅದರ ಪ್ರತಿಯನ್ನು ರವಾನಿಸಿರುತ್ತೇನೆ. ಸಾಕ್ಷಿ ದೂರನ್ನು ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ನಿ ಪಿ 1 ಎಂದು ಗುರುತಿಸಲಾಗಿದೆ ಅದರಲ್ಲಿರುವ ಸಾಕ್ಷಿದಾರರ ಸಹಿಯನ್ನು ನಿ ಪಿ 1(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ಎಫ್ ಐ ಆರ್ ನೋಡಿ ಗುರುತಿಸಿದ್ದು ಅದನ್ನು ನಿ ಪಿ 29 ಎಂದು, ಅದರಲ್ಲಿರುವ ಸಾಕ್ಷಿ ಸಹಿಯನ್ನು ನಿ ಪಿ 29 (ಎ) ಎಂದು ಗುರುತಿಸಲಾಯಿತು. ನಂತರ ಅದೇ ದಿನ ಪಂಚ ಸಾಕ್ಷಿದಾರರಾದ ಚಾಸಾ-2 ಮತ್ತು 3 ಇವರ ಸಮಕ್ಷಮ ಗುನ್ಹೆ ಸ್ಥಳದ ಪಂಚನಾಮೆಯನ್ನು ಮಾಡಿರುತ್ತೇನೆ ಸಾಕ್ಷಿದಾರರು ನೋಡಿ ಗುರುತಿಸಿದ್ದು ಈಗಾಗಲೇ ನಿ ಪಿ 2 ಎಂದು ಸಾಕ್ಷಿದಾರರ ಸಹಿಯನ್ನು ನಿ ಪಿ 2(ಸಿ) ಎಂದು ಗುರುತಿಸಲಾಯಿತು.

ಮುಂದಿನ ತನಿಖೆಗಾಗಿ ಕಡತಗಳನ್ನು ಚಾಸಾ-11 ರವರಿಗೆ ಕೊಟ್ಟಿರುತ್ತೇನೆ. ಚಾಸಾ-11 ರವರು ಮೃತಪಟ್ಟಿರುತ್ತಾರೆ. ಹಾಗಾಗಿ ಚಾಸಾ-11 ರವರ ಸಹಿಗಳನ್ನು ನಾನು ಗುರುತಿಸುತ್ತೇನೆ. ಚಾಸಾ-11 ರವರು ದಿನಾಂಕ: 20-08-2017 ರಂದು ಚಾಸಾ-1 ರವರ ಪುರವಣಿ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ ಅದೇ ದಿನ ಸಾಕ್ಷಿದಾರರಾದ ಚಾಸಾ-4 ರಿಂದ 7 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ಅದೇ ದಿನ ವಿವಾದಿತ ಜಮೀನಿನಮ ಎರಡು ಪಹಣಿಗಳನ್ನು ಪಡೆದುಕೊಂಡಿರುತ್ತಾರೆ. ಆ ಎರಡು ಪಹಣಿಗಳನ್ನು

ಸಾಕ್ಷಿದಾರರು ನೋಡಿ ಗುರುತಿಸಿದ್ದರಿಂದ ಈಗಾಗಲೇ ನಿ ಪಿ 2 ಮತ್ತು 3 ಎಂದು ಗುರುತಿಸಲಾಗಿದೆ. ದಿನಾಂಕ: 09-05-2005 ರ ಮಂಜೂರಿ ಅರ್ಜಿಯನ್ನು, ಮತ್ತು ಚಲನ್, ಪ್ರಮಾಣ ಪತ್ರ, ವಂಶಾವಳಿ, ಮತದಾರರ ಪಟ್ಟಿ, ದಾಖಲೆಗಳನ್ನು ಪಡೆದುಕೊಂಡಿರುತ್ತಾರೆ. ದಿನಾಂಕ: 23-06-2005 ರ ಮುಟೇಶನ್ ಮತ್ತು ಮೂರು ಕಂಪ್ಯೂಟರ್ ಪಹಣಿಗಳನ್ನು ಪಡೆದುಕೊಂಡಿರುತ್ತಾರೆ. ದಿನಾಂಕ: 16-07-2015 ರ ಫಿರ್ಯಾದಿ ವಂಶಾವಳಿ ಪಡೆದುಕೊಂಡಿರುತ್ತಾರೆ. ದಿನಾಂಕ: 12-07-2015 ರಂದು ಆರೋಪಿಯ ವಂಶಾವಳಿ ಪಡೆದುಕೊಂಡಿರುತ್ತಾರೆ. ದಿನಾಂಕ: 26-09-2015 ರ ಓ ಎಸ್ ನಂಬರ್ 192/2015 ಇದರ ಆದೇಶ ಪುಟ ಮತ್ತು ಫಿರ್ಯಾದಿಯ ಅಫಿಡವಿಟ್ ದಾಖಲೆಯನ್ನು ಪಡೆದುಕೊಂಡಿರುತ್ತಾರೆ. ಸದರಿ ದಾಖಲೆಗಳನ್ನು ಸಾಕ್ಷಿದಾರರು ನೋಡಿ ಗುರುತಿಸಿದ್ದು ಈಗಾಗಲೇ ನಿ ಪಿ 4 ರಿಂದ 28 ಎಂದು ಗುರುತಿಸಲಾಗಿದೆ. ಓ ಎಸ್ ನಂಬರ್ 192/2015 ಇದರ ಆದೇಶ ಪುಟ ಮತ್ತು ಫಿರ್ಯಾದಿಯ ಅಫಿಡವಿಟ್ ನೋಡಿ ಗುರುತಿಸಿರುತ್ತಾರೆ ಅದನ್ನು ನಿ ಪಿ 30 ಎಂದು ಗುರುತಿಸಲಾಯಿತು. ದಿನಾಂಕ: 20-08-2017 ರಂದು ಹನುಮಂತಿ ರವರ ಮರಣ ಪ್ರಮಾಣ ಪತ್ರವನ್ನು ಮತ್ತು ಚಾಸಾ-8 ಮತ್ತು 9 ರವರ ಹೇಳಿಕೆಯನ್ನು ಪಡೆದುಕೊಂಡಿರುತ್ತಾರೆ. ನಂತರ ತನಿಖೆಯನ್ನು ಪೂರ್ಣಗೊಳಿಸಿ ಚಾಸಾ-1 ರವರು ಮಾನ್ಯ ನ್ಯಾಯಾಲಯಕ್ಕೆ ಆರೋಪಿತರ ವಿರುದ್ಧ ದೋಷಾರೋಪಣೆ ಪತ್ರ ಸಲ್ಲಿಸಿರುತ್ತಾರೆ. ಆರೋಪಿತರನ್ನು ನೋಡಿದರೆ ಗುರುತಿಸುತ್ತೇನೆ ಆರೋಪಿತರು ಗೈರು ಹಾಜರು ಇರುವುದರಿಂದ ಗುರುತಿಸಲು ಯಾವುದೇ ತಕರಾರು ಇರುವುದಿಲ್ಲ ಎಂದು ತಿಳಿಸಿರುತ್ತಾರೆ.

**ಪಾಟೀಸವಾಲು: ಶ್ರೀ ಎಮ್.ಎಮ್. ವಕೀಲರಿಂದ:-**

**1.** ಫಿರ್ಯಾದಿ ಕೊಡಲು ಫಿರ್ಯಾದಿದಾರರ ಜೊತೆ ಇಬ್ಬರು ಬಂದಿರುತ್ತಾರೆ ಅವರು ಯಾರು ಎಂದು ನನಗೆ ಗೊತ್ತಿಲ್ಲ. ಫಿರ್ಯಾದಿದಾರರು ಫಿರ್ಯಾದಿಯನ್ನು ಮಾತ್ರ ಕೊಟ್ಟಿರುತ್ತಾರೆ ಅದರ ಜೊತೆ ಏನೂ ಕೊಟ್ಟಿರುವುದಿಲ್ಲ. ಫಿರ್ಯಾದಿಯ ಜೊತೆಗೆ ಲಗತ್ತು ಎಂದು ದಾಖಲೆಗಳನ್ನು ನಮೂದು ಮಾಡಿರುತ್ತಾರೆ ಆ ದಾಖಲೆಗಳನ್ನು ಫಿರ್ಯಾದಿ ಜೊತೆಗೆ ಕೊಟ್ಟಿರುವುದಿಲ್ಲ. ಫಿರ್ಯಾದಿ ಸಲ್ಲಿಸಿದಾಗ ಅದರಲ್ಲಿ ದಿನಾಂಕ ನಮೂದು ಮಾಡಿರುತ್ತಾರೆ. ಸಾಕ್ಷಿಗೆ ದೂರನ್ನು ತೋರಿಸಿದ್ದು ಅದರಲ್ಲಿ ದಿನಾಂಕ ಖಾಲಿ ಬಿಟ್ಟಿರುತ್ತಾರೆ ಎನ್ನುತ್ತಾರೆ. ಘಟನೆಯು 2005 ರಲ್ಲಿ ಅವರಿಗೆ ಗೊತ್ತಾಗಲಾರದಂತೆ ಮುಟೇಶನ್ ಮಾಡಿಸಿರುತ್ತಾರೆ ಎಂದು ಘಟನೆ ಆಗಿದ್ದು ದೂರನ್ನು 2015 ರಲ್ಲಿ 10 ವರ್ಷ ತಡವಾಗಿ ಸಲ್ಲಿಸಿದ್ದಕ್ಕಾಗಿ ಎಫ್ ಐ ಆರ್ ನ ಕಾಲಂ ಕಾಲಂ ನಂಬರ್ 8 ರಲ್ಲಿ ಕಾರಣಗಳನ್ನು ತೋರಿಸಿದ್ದೀರಾ ಎಂದರೆ ಸಾಕ್ಷಿಯು ತೋರಿಸಿಲ್ಲ ಎನ್ನುತ್ತಾರೆ.

2. ಪಂಚನಾಮೆಯನ್ನು ಹಳೆ ತಹಶೀಲ್ದಾರ ಕಚೇರಯ ಮುಂದುಗಡೆ ಬಯಲು ಜಾಗೆಯಲ್ಲಿ ಮಾಡಿರುತ್ತೇನೆ. ಘಟನಾ ಸ್ಥಳದಲ್ಲಿ ಹೊಡೆದಾಡಿರುತ್ತಾರೆ ಎಂದು ಪಂಚನಾಮೆ ಮಾಡಿರುತ್ತೇನೆ. ಪಂಚನಾಮೆ ಮಾಡಿದ ಜಾಗದ ಚಕ್ ಬಂದಿ ಪೂರ್ವಕ್ಕೆ - ಪಶ್ಚಿಮ, ಉತ್ತರ ದಿಕ್ಕಿಗೆ ತಹಶೀಲ್ದಾರ

ಕಾರ್ಯಾಲಯ ಆವರಣ, ದಕ್ಷಿಣ ದಿಕ್ಕಿಗೆ ಪಹಣಿ ಹಂಚಿಕೆ ಮಾಡುವ ಕೋಣೆ ಇರುತ್ತದೆ. ದೇವದುರ್ಗ ತಹಶೀಲ್ದಾರ ಕಾರ್ಯಾಲಯದ ಒಳಗಡೆ ನಾನು ಪಂಚನಾಮೆ ಮಾಡಿರುವುದಿಲ್ಲ. ಪಂಚನಾಮೆಯ ಸ್ಥಳವನ್ನು ಚಾಸಾ-2 ಮತ್ತು 3 ಪಂಚರು ತೋರಿಸಿರುತ್ತಾರೆ. ಪಂಚನಾಮೆಯುನ್ನು ಅದೇ ದಿನ ದಿನಾಂಕ: 29-07-2015 ರಂದು ಬೆಳಿಗ್ಗೆ 8-00 ಗಂಟೆಯಿಂದ 9-00 ಗಂಟೆಯವರೆಗೆ ಮಾಡಿರುತ್ತೇನೆ. ನಿ ಪಿ 2 ಪಂಚನಾಮೆಯಲ್ಲಿ ದಿನಾಂಕ ಮತ್ತು ಸಮಯವನ್ನು ನಮೂದು ಮಾಡಿರುವುದಿಲ್ಲ. ಮುಂದಿನ ತನಿಖೆಗಾಗಿ ಕಡತಗಳನ್ನು ಚಾಸಾ-11 ರವರಿಗೆ ಒಪ್ಪಿಸಿರುತ್ತೇನೆ ಅವರು ಮುಂದೆ ಏನೂ ತನಿಖೆ ಮಾಡಿರುತ್ತಾರೆ ಎಂದು ನನಗೆ ಗೊತ್ತಿಲ್ಲ. ಫಿರ್ಯಾದಿದಾರರಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಫಿರ್ಯಾದಿ ತೆಗೆದುಕೊಂಡಿದ್ದೀರಿ ಎಂದರೆ ಸರಿಯಲ್ಲ. ನೀವು ದಿನಾಂಕ: 29-07-2015 ರಂದು ಬೆಳಿಗ್ಗೆ 8-00 ಗಂಟೆಯಿಂದ 9-00 ಗಂಟೆಯವರೆಗೆ ಪಂಚನಾಮೆ ಮಾಡಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೀರಿ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ಸಾಕ್ಷಿಯು ನೀಡಿದ ಸಾಕ್ಷ್ಯವನ್ನು ಯಥಾವತ್ತಾಗಿ ನನ್ನ ಉಕ್ತ ಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿಸಿಕೊಳ್ಳಲಾಯಿತು.)

ಓ.ಹೇ.ಕೇ.ಸರಿ.ಇದೆ.
ಸಹಿ/-

ಪ್ರ.ದ.ನ್ಯಾ.ದಂ.ಗಳು, ದೇವದುರ್ಗ.